ಅಧ್ಯಕ್ಷರು: ಅದಕ್ಕೂ ಇದಕ್ಕೂ ಏನು ಸಂಬಂಧವಿದೆ? ಈಗಾಗಲೇ ಸಾಕಷ್ಟು ಸಮಯವಾಗಿರುವುದರಿಂದ ಹೆಗಡೆಯವರ ಪ್ರಶ್ನೆಗೆ ಸಚಿವರೇ ತಾವು ಉತ್ತರ ಹೇಳಿ.

ಶ್ರೀ ವಿ. ಮುನಿಯಪ್ಪ: 1997ಕ್ಕೆ ಬಿಸ್‌ಗೋಡ್ ಗಣಿಗಾರಿಕೆಯನ್ನು ತಾವು ನಿಲ್ಲಿಸಿದ್ದು ಇದನ್ನು ಯಾವುದೇ ಕಾರಣಕ್ಕೂ ಮುಂದುವರಿಸುವುದಿಲ್ಲ. ಅದು ಪಶ್ಚಿಮಘಟ್ಟದ ವ್ಯಾಪ್ತಿಯಲ್ಲಿ ಬರುವುದರಿಂದ ಮುಂದೆ ಗಣಿಗಾರಿಕೆ ಮಾಡತಕ್ಕಂಥ ಅವಕಾಶವಿಲ್ಲ. ಮಳೆ ಬಂದಾಗ ನೀರು ಹರಿದು ಮಣ್ಣು ಕೊಚ್ಚಿಕೊಂಡು ಹೋಗುತ್ತದೆಂದು ತಾವು ಏನು ಹೇಳಿದಿರಿ ಇದು ಅರಣ್ಯ ಇಲಾಖೆಯ ವ್ಯಾಪ್ತಿಯಲ್ಲಿ ಬರುವುದರಿಂದ, ತಾವು ಕೊಟ್ಟ ಸಲಹೆಯನ್ನು ಅರಣ್ಯ ಇಲಾಖೆಗೆ ಕಳುಹಿಸಿಕೊಡುತ್ತೇನೆ.

ಶ್ರೀ ಹೆಚ್. ಶಂಕರಲಿಂಗೇಗೌಡ: ಖನಿಜ ಭವನದಲ್ಲಿ ಬಹಳ ಕಡಿಮೆ ರೇಟ್‌ಗೆ ಬಾಡಿಗೆ ಕೊಟ್ಟಿದ್ದಾರೆಂದು ಜನ ಹೇಳುತ್ತಿದ್ದಾರೆ. ಇದಕ್ಕೆ ನೀವು ಉತ್ತರ ಕೊಡಬೇಕಾಗುತ್ತದೆ.

ಅಧ್ಯಕ್ಷರು: ಅವರು ಕೇಳಿರುವ ಪ್ರಶ್ನೆಗೂ ನಿಮ್ಮ ಪ್ರಶ್ನೆಗೂ ಸಂಬಂಧವಿಲ್ಲವಾದ್ದರಿಂದ ಅವರು ಉತ್ತರಿಸುವುದಿಲ್ಲ, ತಾವು ಬೇಕಾದರೆ ಬೇರೆ ಪ್ರಶ್ನೆ ತನ್ನಿ, ಆಗ ಅವರು ಉತ್ತರಿಸುತ್ತಾರೆ.

(ಗೊಂದಲ)

Mr. Speaker: The Minister need not answer that question.

ಬೆಲೆ ಕುಸಿತದಿಂದ ಹಾನಿಗೊಳಗಾದ ರೈತರಿಗೆ ಆವರ್ತ ನಿಧಿಯಿಂದ ಹಣ ಬಿಡುಗಡೆ

50(612) ಶ್ರೀ ರವೀಂದ್ರನಾಥ್ ಎಸ್.ಎ. (ಮಾಯಕೊಂಡ): ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಲೆ ಕುಸಿತದಿಂದ ಹಾನಿಗೊಳಗಾದ ರೈತರ ನೆರವಿನ ಸರ್ಕಾರ ಎಷ್ಟು ಕೋಟಿ ರೂ.ಗಳ ಆವರ್ತ ನಿಧಿಯನ್ನು ಎಂದಿನಿಂದ ಸ್ಥಾಪಿಸಿತು;

ಆ) ಆವರ್ತ ನಿಧಿ ಹಣವನ್ನು ಯಾವ ಯಾವ ಮೂಲಗಳಿಂದ ಸಂಗ್ರಹಿಸಲಾಗಿದೆ; (ಜಿಲ್ಲಾವಾರು ವಿವರ)

ಇ) ಸದರಿ ಹಣದಿಂದ ಒಟ್ಟು ಎಷ್ಟು ಜನ ರೈತರಿಗೆ ಇದುವರೆಗೆ ಹಣ ಬಿಡುಗಡೆ ಮಾಡಲಾಗಿದೆ. ತಾಲ್ಲೂಕುವಾರು ಮಾಹಿತಿ ನೀಡುವುದು?

ಶ್ರೀ ಆರ್.ಬಿ. ತಿಮ್ಮಾಪೂರ್ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು):

ಅ) ಸರ್ಕಾರ ಆದೇಶ ಸಂಖ್ಯೆ: ಸಿಎಂಡಬ್ಲ್ಯೂ: 239: ಎಂಆರ್‌ಇ: 97, ದಿನಾಂಕ: 24-11-1999 ರಲ್ಲಿ ಸದರಿ ನಿಧಿಗೆ ರೂ. 15.00 ಕೋಟಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಿಂದ ಮತ್ತು ರೂ. 5.00 ಕೋಟಿ ಕರ್ನಾಟಕ ಸರ್ಕಾರದಿಂದ ನೀಡಲು ಆದೇಶಿಸಲಾಗಿತ್ತು. ನಂತರ ಸದರಿ ಸರ್ಕಾರಿ ಆದೇಶವನ್ನು ಮಾರ್ಪಾಡು ಮಾಡಿ ಪರಿಷ್ಕೃತ ಆದೇಶ ಸಂಖ್ಯೆ: ಸಿಎಂಡಬ್ಲ್ಯೂ: 369: ಎಂಆರ್‌ಇ: 2000, ದಿನಾಂಕ: 03-01-2001 ರಲ್ಲಿ ಆವರ್ತ ನಿಧಿಯನ್ನು ರೂ. 75.00

ಕೋಟಿಗಳಿಗೆ ಏರಿಸಿ ರೂ. 50.00 ಕೋಟಿಗಳನ್ನು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಿಂದ ರೂ. 25.00 ಕೋಟಿ ಸರ್ಕಾರದಿಂದ ಭರಿಸಲು ಆದೇಶಿಸಲಾಗಿದೆ.

ಆ) ರಾಜ್ಯದ 80 ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಿಂದ ಇಲ್ಲಿಯವರೆಗೆ ಒಟ್ಟು ರೂ. 33.56 ಕೋಟಿಗಳು ಸಂಗ್ರಹವಾಗಿದೆ. ರಾಜ್ಯ ಸರ್ಕಾರವು ರೂ. 5.00 ಕೋಟಿಗಳನ್ನು ಅವರ್ತ ನಿಧಿಗೆ ಬಿಡುಗಡೆ ಮಾಡಿರುತ್ತದೆ. ರಾಜ್ಯ 80 ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಿಂದ ಸಂಗ್ರಹವಾಗಿರುವ ಹಣದ ವಿವರಗಳ ತಃಖ್ತೆ ಲಗತ್ತಿಸಲಾಗಿದೆ.

ಇ) ಸದರಿ ಅವರ್ತಿ ನಿಧಿಯಿಂದ ಇಲ್ಲಿಯವರೆಗೆ ರೂ. 9.40 ಕೋಟಿಗಳನ್ನು ಕೃಷಿ ಉತ್ಪನ್ನಗಳನ್ನು ಖರೀದಿಸಲು ಕರ್ನಾಟಕ ರಾಜ್ಯ ಸಹಕಾರಿ ಮಾರಾಟ ಮಹಾಮಂಡಳ (ನಿ), ಕರ್ನಾಟಕ ಆಹಾರ ಮತ್ತು ನಾಗರೀಕ ಪೂರೈಕೆ ನಿಗಮ, ಹಾಪ್‌ಕಾಮ್ಸ್‌ಗಳಿಗೆ ದಿ: 08-03-2001 ರವರೆಗೆ ಬಿಡುಗಡೆ ಮಾಡಲಾಗಿದೆ. ಈ ಹಣದಿಂದ ಪ್ರಯೋಜನ ಪಡೆದಿರುವ ರೈತರ ಸಂಖ್ಯೆ ಈ ಕೆಳಕಂಡಂತಿದೆ.

ಧಾರವಾಡ ಜಿಲ್ಲೆ	-	3,190
ಬೆಳಗಾವಿ ಜಿಲ್ಲೆ	-	688
ಗುಲ್ಬರ್ಗ ಜಿಲ್ಲೆ	-	1,218

ಶ್ರೀ ಎಸ್.ಎ. ರವೀಂದ್ರನಾಥ್: ಸರ್ಕಾರವು 3-1-2001 ರಲ್ಲಿ ಅವರ್ತನಿಧಿಯನ್ನು 75 ಕೋಟಿ ರೂಪಾಯಿಗಳಿಗೆ ಏರಿಸಿದ್ದು, ಖರೀದಿ ಮಾಡಿರುವುದು ಕೇವಲ 9.40 ಕೋಟಿ ರೂಪಾಯಿಗಳಿಗೆ ಮಾತ್ರ. ಉಳಿದ ಹಣ ಸುಮಾರು 65 ಕೋಟಿ ರೂಪಾಯಿ ಇದೆ. ನಮ್ಮ ದಾವಣಗೆರೆಯ ಅನೇಕ ಹಳ್ಳಿಗಳಲ್ಲಿ ಕೇವಲ 10 ರಿಂದ 20 ಪರ್ಸೆಂಟ್ ಮಾತ್ರ ಗೋವಿನ ಜೋಳವನ್ನು ಖರೀದಿ ಮಾಡಿದ್ದಾರೆ, ಮಾರ್ಚಿ 31ಕ್ಕೆ ಎಫ್.ಸಿ.ಐ. ನವರು ಕ್ಲೋಸ್ ಮಾಡುತ್ತಿದ್ದಾರೆ. ನನ್ನ ಸಲಹೆ ಏನೆಂದರೆ, ಉಳಿದ 65 ಕೋಟಿ ರೂಪಾಯಿಗಳಲ್ಲಿ ಸೊಸೈಟಿ ಮೂಲಕ ಖರೀದಿ ಮಾಡಿದರೆ, ಸೊಸೈಟಿಯ ಸಾಲ ಜಮಾವಾಗುವುದರಿಂದ ಸರ್ಕಾರಕ್ಕೂ ಕೂಡ ಲಾಭವಾಗುವುದಲ್ಲದೆ ರೈತರಿಗೆ ಕೂಡ ಅನುಕೂಲವಾಗುತ್ತದೆ, ಸಾಕಷ್ಟು ಬೆಲೆ ಬಿದ್ದು ಹೋಗಿರುವುದರಿಂದ ಸರ್ಕಾರ ಈ ಕ್ರಮವನ್ನು ತೆಗೆದುಕೊಳ್ಳಲಿ ಎಂದು ನಾನು ಒತ್ತಾಯಿಸುತ್ತೇನೆ.

ಶ್ರೀ ಆರ್.ಬಿ. ತಿಮ್ಮಾಪ್ಪುರ್: ಅವರ್ತನಿಧಿಗೆ 23 ಕೋಟಿ ರೂಪಾಯಿ ನಾವು ಖರ್ಚು ಮಾಡುವ ವ್ಯವಸ್ಥೆಯಿದ್ದು, ಕೇಂದ್ರ ಸರ್ಕಾರದ ಪರಿಷ್ಕೃತ ಯೋಜನೆಯನ್ವಯ ಅವರು ಎಫ್.ಸಿ.ಐ. ಮೂಲಕ ಪ್ರಾರಂಭಿಸಿದ್ದಾರೆ. ಖರೀದಿಯಲ್ಲಿ ಏನಾದರೂ ತೊಂದರೆಯಾದಾಗ ಈ ಹಣವನ್ನು ಯುಟಿಲೈಜ್ ಮಾಡುವಂಥ ವ್ಯವಸ್ಥೆಯಿದ್ದು, ಅವರು ಖರೀದಿ ಮಾಡದಿದ್ದರೆ ಅದನ್ನು ನಾವು ಖರೀದಿಸುತ್ತೇವೆ.

ಶ್ರೀ ಎಸ್.ಎ. ರವೀಂದ್ರನಾಥ್: ನಮ್ಮ ಗ್ರಾಮೀಣ ಭಾಗದಲ್ಲಿರುವ ವಿ.ಎಸ್.ಎಸ್. ಸೊಸೈಟಿಗಳ ಮೂಲಕ ಖರೀದಿ ಮಾಡುವುದರಿಂದ ಸಾಲ ತೆಗೆದುಕೊಂಡಿರುವವರ ಹಣ

ಕೂಡ ಜಮೀನು ಆಗುವುದರ ಜೊತೆಗೆ ರೈತರಿಗೆ ಅನುಕೂಲವಾಗುತ್ತದೆ, ಆದ್ದರಿಂದ ಇದನ್ನು ಏಕೆ ನೀವು ಮಾಡಬಾರದು ಎಂದು ನಿಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ಕೇಳಲಿಚ್ಛಿಸುತ್ತೇನೆ.

ಶ್ರೀ ಆರ್.ಬಿ. ತಿಮ್ಮಾಪ್ಪುರ್: ಮಾನ್ಯ ಸದಸ್ಯರು ತಿಳಿಸಿದಂತೆ ವಿ.ಎಸ್.ಎಸ್. ಮೂಲಕ ಖರೀದಿ ಮಾಡುವುದಕ್ಕೆ ಸಧ್ಯಕ್ಕೆ ಬರುವುದಿಲ್ಲ, ಕೇಂದ್ರ ಸರ್ಕಾರದವರು ಯುಟಿಲೈಸ್ ಮಾಡಿದ್ದರೆ ಅಥವಾ ಖರೀದಿಸಿದ್ದರೆ ಮುಂದೆ ಈ ವಿಚಾರ ಮಾಡಬಹುದು.

ಶ್ರೀ ಎಸ್.ಎ. ರವೀಂದ್ರನಾಥ್: ಮಾರುಕಟ್ಟೆ ಫೆಡರೇಷನ್ ಮೂಲಕ ಖರೀದಿಸಬಹುದು.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ: ಅತ್ಯಂತ ಕೆಟ್ಟದಾದ ಈ ರೀತಿಯ ಗೋಧಿ, ಜೋಳ, ಅಕ್ಕಿಯನ್ನು ಜನ ಸಾಮಾನ್ಯರು ತೆಗೆದುಕೊಂಡು ಹೋದರೆ ಹೇಗೆ? ಅವರು ಇದನ್ನು ತಿಂದರೆ ಹೇಗೆ ಬದುಕುವುದು?

(ಈ ಹಂತದಲ್ಲಿ ಮಾನ್ಯ ಶಂಕರಲಿಂಗೇಗೌಡ ತಾವು ತಂದಿದ್ದ ಗೋಧಿಯನ್ನು ಸನ್ಮಾನ್ಯ ಸಭಾಧ್ಯಕ್ಷರಿಗೂ ಹಾಗೂ ಸಚಿವರಿಗೂ ತೋರಿಸಿದರು)

ಶ್ರೀ ಡಿ.ಬಿ. ಚಂದ್ರೇಗೌಡ: ಈ ಸದನದಲ್ಲಿ ಈ ರೀತಿ ತಂದು ತೋರಿಸಿದರೆ ಹೇಗೆ?

Sri D.B. Chandregowda: If they don't understand, you should name them.

Mr. Speaker: I have no objection to name him. You please name him.

ಶ್ರೀ ಪಿ.ಆರ್. ಸಗೀರ್ ಅಹಮದ್: ಮಾನ್ಯ ಸದಸ್ಯರು ಯಾವ ಗೋದಾಮಿನಿಂದ ಈಗ ಗೋಧಿಯನ್ನು ತಂದಿದ್ದಾರೆ. ಅದರ ಬಗ್ಗೆ ಮಾಹಿತಿ ಬೇಕಲ್ಲವೇ? ಅಥವಾ ಯಾವ ನ್ಯಾಯ ಬೆಲೆ ಅಂಗಡಿಯಿಂದ ತಂದರು ಎಂಬ ಬಗ್ಗೆ ಮಾಹಿತಿ ಬೇಕಲ್ಲವೆ?

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ: ಪೊಲೀಸ್ ಕಾಲೋನಿಯ ಡಿಪೋದಿಂದ ತಂದಿದ್ದು.

ಶ್ರೀ ಪಿ.ಆರ್. ಸಗೀರ್ ಅಹಮದ್: ನೀವು ಬರೆದು ಕೊಡಿ, ನೀವು ಹೇಳುವಂತೆ ಅಲ್ಲಿ ಈ ರೀತಿಯ ಗೋಧಿ ಇದ್ದರೆ ದೂಡು ನೀಡುವಂಥ ಅವಕಾಶ ಅಲ್ಲಿ ಇತ್ತು, ಅವರು ಅಲ್ಲಿ ದೂರು ನೀಡಿದ್ದಾರೆಯೋ? ಸುಮ್ಮನೆ ಇಲ್ಲಿ ತಂದು ಪ್ರದರ್ಶಿಸಿದರೆ ಹೇಗೆ?

(ಗೊಂದಲ)

ಶ್ರೀ ಡಿ.ಕೆ. ಶಿವಕುಮಾರ್: ನೀವು ಇಂಥ ಸೊಸೈಟಿಯಿಂದ ತಂದಿದ್ದು ಎಂದು ಬರೆದು ಕೊಡಿ ರೈಡ್ ಮಾಡಿಸೋಣ. ಇಂಥ ವಿಚಾರಗಳು ಬಂದಾಗ ಮಾನ್ಯ ಮುಖ್ಯಮಂತ್ರಿಗಳ ಗೋಷ್ಠಿಯಲ್ಲಿ ಹೋಗಿ ರೈಡ್ ಮಾಡಿರುವುದ ತಮಗೆ ಗೊತ್ತಿರಬಹುದು.

11.00 ಎ.ಎಂ.

ಶ್ರೀ ಹೆಚ್.ಸಿ. ಬಸವರಾಜು: ಎಫ್‌ಸಿಐನವರು ಮುಸುಕಿನ ಜೋಳವನ್ನು ಎಲ್ಲೆಲ್ಲಿ ಖರೀದಿಸುತ್ತಿದ್ದಾರೆ, ಅಂಥ ಜಾಗಗಳಲ್ಲಿ ರಾಜ್ಯ ಸರ್ಕಾರದವರು ಎಪಿಎಂಸಿ ಮೂಲಕ ಖರೀದಿಸುತ್ತೇವೆಂದು ತಿಳಿಸಿದ್ದಾರೆ. ಈ ತಿಂಗಳಿನಲ್ಲಿ 15 ದಿವಸಗಳಿಂದ ಮೈಸೂರು ಜಿಲ್ಲೆಯ ಪಿರಿಯಾಪಟ್ಟಣದಲ್ಲಿ ಎಫ್‌ಸಿಐ ನವರು ಒಂದೇ ಒಂದು ಕ್ವಿಂಟಾಲ್ ಜೋಳವನ್ನು ಸಹ ಪರ್ಚೇಸ್ ಮಾಡುತ್ತಿಲ್ಲ. ಇದು ಸರ್ಕಾರದ ಗಮನಕ್ಕೆ ಬಂದಿದೆಯೇ? ಇದಕ್ಕೇನು ಕ್ರಮ ತೆಗೆದುಕೊಂಡಿದ್ದೀರಿ?

ಶ್ರೀ ಆರ್.ಬಿ. ತಿಮ್ಮಾಪುರ್: ಕೇಂದ್ರ ಸರ್ಕಾರದ ಈ ಯೋಜನೆಯನ್ನು ಅನುಷ್ಠಾನಗೊಳಿಸಲು ನಮ್ಮ ಏಜೆನ್ಸಿಯನ್ನು ಉಪಯೋಗ ಮಾಡಿಕೊಳ್ಳುತ್ತಿದ್ದೇವೆ. ಅದನ್ನು ಖರೀದಿಸುವುದು ಅವರ ಆದ್ಯ ಕರ್ತವ್ಯ. ರೈತರ ಪರವಾಗಿ, ದರ ಕಡಿಮೆ ಬಂದಾಗ, ಖರೀದಿಸುತ್ತೇವೆಂಬ ಘೋಷಣೆ ಮಾಡಿದ್ದೇವೆ. ಖರೀದಿ ಮಾಡಲೇಬೇಕು. ಇದರ ಬಗ್ಗೆ ನಂತರ ನಾವು ಕ್ರಮ ತೆಗೆದುಕೊಳ್ಳುತ್ತೇವೆ. ಖರೀದಿಸಲು ಅವರನ್ನು ನಾವು ಒತ್ತಾಯಿಸುತ್ತಿದ್ದೇನೆ.

ಶ್ರೀ ಎಂ.ಡಿ. ಲಕ್ಷ್ಮಿನಾರಾಯಣ: ಕೊಬ್ಬರಿ ಖರೀದಿ ಬಗ್ಗೆಯೂ ನಾನು ನಿನ್ನೆ ಸದನದಲ್ಲಿ ಪ್ರಸ್ತಾಪಿಸಿದ್ದೆ. ಮಂತ್ರಿಗಳೂ ಕೂಡ ಕ್ಯಾಬಿನೆಟ್ ಸಬ್‌ಕಮಿಟಿಯಲ್ಲಿಟ್ಟು ಇದರ ಬಗ್ಗೆ ಪ್ರಸ್ತಾಪಿಸುತ್ತೇನೆಂದಿದ್ದರು. ಮಂತ್ರಿಗಳು ಉತ್ತರ ಕೊಡುವಾಗ, 38 ಕೋಟಿ 56 ಲಕ್ಷ ರೂಪಾಯಿಗಳ ಹಣ ಉಳಿದಿದೆ ಹಾಗೂ ಖರ್ಚಾದದ್ದು 9 ಕೋಟಿ 40 ಲಕ್ಷ ರೂಪಾಯಿಗಳು ಎಂದು ತಿಳಿಸಿದ್ದರು. ಉಳಿದ 29 ಕೋಟಿ 16 ಲಕ್ಷ ರೂಪಾಯಿಗಳು ರಾಜ್ಯ ಸರ್ಕಾರದ ಬಳಿ ಇದ್ದರೂ ಏಕೆ 2 ತಿಂಗಳಿಂದ ಚೆಕ್ ಬೌನ್ಸ್ ಆಗುತ್ತಿದೆ? ರೈತರು ಜಿಲ್ಲಾ ಬ್ಯಾಂಕ್‌ಗೆ ಅಲೆದೂ ಅಲೆದೂ ವಾಪಸ್ ಹೋಗುವ ಪರಿಸ್ಥಿತಿ ಇದೆ. ಮಾರುಕಟ್ಟೆಗಳಲ್ಲಿ ರೈತರು ಛೀಮಾರಿ ಹಾಕುತ್ತಿದ್ದಾರೆ. ಅವರು ತಂದಿರುವ ಮಾಲನ್ನು ವಾಪಸ್ ತೆಗೆದುಕೊಂಡು ಹೋಗುವ ಪರಿಸ್ಥಿತಿ ಇದೆ. ಆದುದರಿಂದ, ಹಣವನ್ನು ಬಿಡುಗಡೆ ಮಾಡಿ, ಚೆಕ್ ಬೌನ್ಸ್ ಆಗದ ಹಾಗೆ, ಏಕೆ ಮಾಡುತ್ತಿಲ್ಲ?

ಶ್ರೀ ಆರ್.ಬಿ. ತಿಮ್ಮಾಪುರ್: ಅವರೇನು ಹೇಳಿದ್ದಾರೆ, ಅದರ ವ್ಯವಸ್ಥೆ ಏನಿದೆ, ಅದನ್ನು ಪರಿಶೀಲಿಸಿ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಎಸ್.ಎ. ರವೀಂದ್ರನಾಥ್: ರಾಜ್ಯದಲ್ಲಿ 32 ಲಕ್ಷ ರೈತರಿದ್ದಾರೆ. ಆ ರೈತರ ಕುಟುಂಬಗಳಿಗೆ ನಾವು ಸ್ವಲ್ಪವೂ ಸಹಾಯ ಮಾಡದಿದ್ದರೆ, ಅರ್ಥವೇನಿದೆ? ಕೃಷಿ ಉತ್ಪನ್ನಗಳನ್ನು ಕರ್ನಾಟಕ ರಾಜ್ಯ ಸಹಕಾರಿ ಮಾರಾಟ ಮಂಡಳಿಗಳಲ್ಲಿ ಖರೀದಿಸುವ ಅವಕಾಶವಿದೆ. ಅದನ್ನು ಮಾಡಲಿ. ನಾನು ನಿಮ್ಮ ಮೂಲಕ ಒತ್ತಾಯಿಸುತ್ತಿದ್ದೇನೆ, ಆ ಹಣದಿಂದ ಇದನ್ನು ಮಾಡಲೇಬೇಕು.

ಶ್ರೀ ಆರ್.ಬಿ. ತಿಮ್ಮಾಪುರ್: ಒತ್ತಾಯ ಮಾಡುವುದು ನಮ್ಮ ಆದ್ಯ ಕರ್ತವ್ಯ. ಕೇಂದ್ರ ಸರ್ಕಾರದವರು ಮಾಡುತ್ತೇವೆಂದು ತಿಳಿಸಿದ್ದಾರೆ.

(ಗೊಂದಲ)

ಅಧ್ಯಕ್ಷರು: 3-4- ಜನ ಸದಸ್ಯರು ಒಟ್ಟಿಗೆ ಎದ್ದುನಿಂತು ಮಾತನಾಡುವಾಗ ರೆಕಾರ್ಡ್ ಮಾಡಿಕೊಳ್ಳಬೇಡಿ. ಗೊಂದಲವೆಂದು ಬರೆದುಕೊಳ್ಳಿ.

ಜುವೆನೈಲ್ ಜಸ್ಟೀಸ್ ಕಾಯಿದೆಯಡಿಯಲ್ಲಿ ಯೋಜನೆಗಳು

127(1567) ಶ್ರೀ ವಿ. ಸೋಮಣ್ಣ (ಬಿನ್ನಿಪೇಟೆ): ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜುವೆನೈಲ್ ಜಸ್ಟೀಸ್ ಕಾಯಿದೆಯಡಿಯಲ್ಲಿ ಹಮ್ಮಿಕೊಂಡಿರುವ ಯೋಜನೆಗಳು ಯಾವುವು;

ಆ) ಕಳೆದ 3 ವರ್ಷಗಳಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಂದ ಬಿಡುಗಡೆಯಾಗಿರುವ ಮೊಬಲಗು ಎಷ್ಟು;

ಇ) ಈ ಹಣವನ್ನು ಯಾವ ಯಾವ ಬಾಬ್ತುಗಳಿಗಾಗಿ ಖರ್ಚು ಮಾಡಲಾಗಿದೆ? (ಪೂರ್ಣ ವಿವರಗಳನ್ನು ನೀಡುವುದು)

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು):

ಅ) ಬಾಲನ್ಯಾಯಕಾಯ್ದೆಯಡಿ ಹಮ್ಮಿಕೊಂಡಿರುವ ಯೋಜನೆ ನಿರ್ಲಕ್ಷಕ್ಕೊಳಗಾದವರು, ಮೋಸಕ್ಕೊಳಗಾದವರು, ಬಾಲಾಪರಾಧಿಗಳು, ಮುಂತಾದವರನ್ನು ಪುನರ್‌ವಸತಿ ಮಾಡಲು, ವೀಕ್ಷಣಾಲಯ, ಬಾಲಮಂದಿರಗಳು ಹಾಗೂ ಅನುಪಾಲಾನಾ ಗೃಹಗಳನ್ನು ನಡೆಸಲಾಗುತ್ತಿದೆ.

ಆ) ಸದರಿ ಯೋಜನೆಯ ಅನುಷ್ಠಾನಕ್ಕೆ ಕಳೆದ ಮೂರು ವರ್ಷಗಳಲ್ಲಿ ಬಿಡುಗಡೆಯಾಗಿರುವ ಅನುದಾನದ ವಿವರ ಈ ಕೆಳಕಂಡಂತೆ ಇರುತ್ತದೆ.

ಕೇಂದ್ರ			ರಾಜ್ಯ
97-98	- 2.38	ರೂ. ಲಕ್ಷ	514.97
98-99	- 31.23	ರೂ. ಲಕ್ಷ	568.66
99-2000	- 29.32	ರೂ. ಲಕ್ಷ	696.22

ಇ) ಸದರಿ ಯೋಜನೆಯಡಿ ಬಿಡುಗಡೆಯಾಗಿರುವ ಹಣವನ್ನು ಸಿಬ್ಬಂದಿ ವೇತನ, ನಿವಾಸಿಗಳ ನಿರ್ವಹಣೆ, ಕಟ್ಟಡದ ಬಾಡಿಗೆ, ವಿದ್ಯುತ್‌ಚ್ಛಕ್ತಿ, ನೀರು, ವಿದ್ಯಾಭ್ಯಾಸ, ವೃತ್ತಿ ತರಬೇತಿ ಮುಂತಾದವುಗಳಿಗೆ ವೆಚ್ಚ ಮಾಡಲಾಗುತ್ತಿದೆ.

ಶ್ರೀ ವಿ. ಸೋಮಣ್ಣ: ಕೇವಲ 8-10 ವರ್ಷದೊಳಗಿನ ಬಹುತೇಕ ಮಕ್ಕಳು ತಪ್ಪುಗಳನ್ನು ಮಾಡಿ, ರಿಮ್ಯಾಂಡ್ ಹೋಂಗಳಲ್ಲಿ ಸೇರುತ್ತಾರೆ. ಅಲ್ಲಿ ಸೇರಿದವರಿಗೆ ಕೆಲವು ಕಾನೂನುಗಳನ್ನು ರಚಿಸಿ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಅವರಿಗೆ ನೀವು ತರಬೇತಿ ನೀಡಿ, ಅವರ